Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**(EXTRAORDINARY)**
ವಿಶೇಷ ಸಂಚಿಕೆ


| | |
|---|---|
| भाग—IX | अनुभाग 1 |
| PART IX | SECTION 1 |
| ಭಾಗ IX | ವಿಭಾಗ 1 |

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| सं—1 | नई दिल्ली सोमवार, आगष्ट 5, 1985 | श्रावण 14, 1907 (शक) | खण्ड—3 |
| No. 1 | New Delhi Monday, August 5, 1985 | Shravana 14, 1907 (Saka) | Vol. 3 |
| ಸಂಖ್ಯೆ ೧ | ನವದೆಹಲಿ ಸೋಮವಾರ, ಆಗಸ್ಟ್ ೫, ೧೯೮೫ | ಶ್ರಾವಣ ೧೪, ೧೯೦೭ (ಶಕ) | ಸಂಪುಟ ೩ |


## MINISTRY OF LAW, AND JUSTICE
(Legislative Department)

New Delhi, May 22, 1985/ Jaistha 1907 (Sakha)

The translations in Kannada of the following namely.—(1) The Fatal Accidents Act, 1855 (2) The Converts Marriage Dissolution Act, 1866 (3) The Indian Easement Act, 1882 (4) The Agriculturists' Loans Act, 1884 (5) The Indian Reserve Forces Act, 1888 (6) The Prevention of Seditious Meetings Act, 1911 (7) The Hindu Disposition of property Act, 1916 (8) The Mica Mines Labour Welfare Fund Act, 1946 (9) The Delivery of Books and Newspapers (Public Libraries) Act, 1954 (10) The Meternity Benefit Act, 1961 (11) The Motor Transports Workers Act, 1961 (12) The Public Provident Fund Act, 1968 and (13) The Authorised Translations (Central Laws) Act, 1973–are hereby published under the authority of the president and shall be deemed to be the authorised translations thereof in Kannada under clause (a) of Section 2 of the authorised Translations (central laws) Act, 1973 (50 of 1973).

ಕೆಳಕಂಡ ಕೇಂದ್ರ ಅಧಿನಿಯಮಂಗಳ ಎಂದರೆ, (೧) ಪ್ರಾಣಾಂತಿಕ ದುರ್ಘಟನಾ ಅಧಿನಿಯಮ, ೧೮೫೫; (೨) ಮತಾಂತರಿತರ ವಿವಾಹ ವಿಘಟನಾ ಅಧಿನಿಯಮ, ೧೮೬೬; (೩) ಭಾರತ ಅನುಭೋಗ ಅಧಿನಿಯಮ, ೧೮೮೨; (೪) ಬೇಸಾಯಗಾರರ ಸಾಲ ಅಧಿನಿಯಮ ೧೮೮೪; (೫) ಭಾರತೀಯ ಮೀಸಲು ದಳ ಅಧಿನಿಯಮ, ೧೮೮೮; (೬) ರಾಜದ್ರೋಹಾತ್ಮಕ ಸಭಾ ಪ್ರತಿಬಂಧಕ ಅಧಿನಿಯಮ, ೧೯೧೧; (೭) ಹಿಂದೂ ಸ್ವತ್ತಿನ ವಿಲೆ ಅಧಿನಿಯಮ, ೧೯೧೬; (೮) ಅಭ್ರಕ ಗಣಿಗಳ ಕಾರ್ಮಿಕರ ಕಲ್ಯಾಣ ನಿಧಿ ಅಧಿನಿಯಮ, ೧೯೪೬; (೯) ಪುಸ್ತಕ ಮತ್ತು ವೃತ್ತಪತ್ರಿಕೆ (ಸಾರ್ವಜನಿಕ ಗ್ರಂಥಾಲಯಗಳಿಗೆ) ಒಪ್ಪಿಸುವ ಅಧಿನಿಯಮ, ೧೯೫೪; (೧೦) ಪ್ರಸೂತಿ ಸೌಕರ್ಯ ಅಧಿನಿಯಮ, ೧೯೬೧; (೧೧) ಮೋಟಾರು ಸಾರಿಗೆ ಕೆಲಸಗಾರರ ಅಧಿನಿಯಮ, ೧೯೬೧; (೧೨) ಸಾರ್ವಜನಿಕ ಭವಿಷ್ಯ ನಿಧಿ ಅಧಿನಿಯಮ, ೧೯೬೮; ಮತ್ತು (೧೩) (ಕೇಂದ್ರ ಕಾನೂನು) ಅಧಿಕೃತ ಭಾಷಾಂತರ ಅಧಿನಿಯಮ, ೧೯೭೩.—ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ (ಕೇಂದ್ರ ಕಾನೂನುಗಳ) ಅಧಿನಿಯಮ, ೧೯೭೩ ರ (೧೯೭೩ ರ ೫೦) ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಂಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

10+13 = 23

**ಹಿಂದೂ ಸ್ವತ್ತಿನ ವಿಲೆ ಅಧಿನಿಯಮ, 1916**

(1916ರ ಅಧಿನಿಯಮ ಸಂಖ್ಯೆ 15)

[28ನೇ ಸೆಪ್ಟೆಂಬರ್, 1916.]

ಹಿಂದೂಗಳು ಸ್ವತ್ತನ್ನು ವಿಲೆ ಮಾಡುವ ದಿನಾಂಕದಂದು ಅಸ್ತಿತ್ವದಲ್ಲಿರದ ವ್ಯಕ್ತಿಗಳ ಪ್ರಯೋಜನಕ್ಕಾಗಿ, ಅಂಥ ಸ್ವತ್ತನ್ನು ವಿಲೆ ಮಾಡುವ ಅಧಿಕಾರಕ್ಕೆ ಸಂಬಂಧಿಸಿ ಇರುವ ಕೆಲವು ನ್ಯೂನತೆಗಳನ್ನು ತೆಗೆದು ಹಾಕುವುದಕ್ಕಾಗಿ ಅಧಿನಿಯಮ.

ಹಿಂದೂಗಳು ಸ್ವತ್ತನ್ನು ವಿಲೆ ಮಾಡುವ ದಿನಾಂಕದಂದು ಅಸ್ತಿತ್ವದಲ್ಲಿರದ ವ್ಯಕ್ತಿಗಳ ಪ್ರಯೋಜನಕ್ಕಾಗಿ, ಅಂಥ ಸ್ವತ್ತನ್ನು ವಿಲೆ ಮಾಡುವ ಅಧಿಕಾರಕ್ಕೆ ಸಂಬಂಧಿಸಿದ ಇರುವ ಕೆಲವು ನ್ಯೂನತೆಗಳನ್ನು ತೆಗೆದುಹಾಕುವುದು ವಿಹಿತವಾಗಿರುವುದರಿಂದ, ಈ ಮೂಲಕ ಕೆಳಕಂಡಂತೆ ಅಧಿನಿಯಮಿಸಲಾಗಿದೆ:–

**1. ಚಿಕ್ಕ ಹೆಸರು ಮತ್ತು ವ್ಯಾಪ್ತಿ.–** (1) ಈ ಅಧಿನಿಯಮವನ್ನು ಹಿಂದೂ ಸ್ವತ್ತಿನ ವಿಲೆ ಅಧಿನಿಯಮ, 1916 ಎಂದು ಕರೆಯತಕ್ಕದ್ದು.

(2) ಇದು, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

**2. ಅಸ್ತಿತ್ವದಲ್ಲಿರದ ವ್ಯಕ್ತಿಗಳ ಪ್ರಯೋಜನಕ್ಕಾಗಿ ವಿಲೆಗಳು.–** ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿರುವ ಮಿತಿಗಳಿಗೆ ಮತ್ತು ಉಪಬಂಧಗಳಿಗೆ ಒಳಪಟ್ಟು, ಯಾರೇ ಹಿಂದೂ ವ್ಯಕ್ತಿಯು, ಜೀವಂತ ವ್ಯಕ್ತಿಗಳ ನಡುವೆ ವರ್ಗಾವಣೆಯ ಮೂಲಕವಾಗಲಿ ಅಥವಾ ಮರಣ ಶಾಸನದ ಮೂಲಕವಾಗಲಿ ಮಾಡಿದ ಸ್ವತ್ತಿನ ವಿಲೆಯು, ಅದನ್ನು ಯಾವ ವ್ಯಕ್ತಿಯ ಪ್ರಯೋಜನಕ್ಕಾಗಿ ಮಾಡಿರಬಹುದೋ, ಆ ವ್ಯಕ್ತಿಯು ಅಂಥ ವಿಲೆಯ ದಿನಾಂಕದಂದು ಅಸ್ತಿತ್ವದಲ್ಲಿರಲಿಲ್ಲವೆಂಬ ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

**3. ಪರಿಮಿತಿಗಳು ಮತ್ತು ಷರತ್ತುಗಳು.–** 2ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಪರಿಮಿತಿಗಳು ಮತ್ತು ಉಪಬಂಧಗಳು ಈ ಕೆಳಕಂಡಂತೆ ಇರತಕ್ಕದ್ದು, ಎಂದರೆ:–

(ಎ) ಜೀವಂತವಿರುವ ವ್ಯಕ್ತಿಗಳ ನಡುವೆ ವರ್ಗಾವಣೆಯ ಮೂಲಕ ಮಾಡಿದ ವಿಲೆಗೆ ಸಂಬಂಧಿಸಿದಂತೆ, ಸ್ವತ್ತು ವರ್ಗಾವಣೆ ಅಧಿನಿಯಮ, 1882 (1882ರ 4)ರ IIನೇ ಅಧ್ಯಾಯದಲ್ಲಿ ಒಳಗೊಂಡಿರುವವುಗಳು; ಮತ್ತು

(ಬಿ) ಮರಣ ಶಾಸನದ ಮೂಲಕ ಮಾಡಿದ ವಿಲೆಗಳಿಗೆ ಸಂಬಂಧಿಸಿದಂತೆ, ಭಾರತ ಉತ್ತರಾಧಿಕಾರ ಅಧಿನಿಯಮ, 1925 (1925ರ 33)ರ 113,114,115 ಮತ್ತು 116ನೇ ಪ್ರಕರಣಗಳಲ್ಲಿ ಒಳಗೊಂಡಿರುವವುಗಳು ಇರತಕ್ಕದ್ದು.

**4. [ಹಿಂದಿನ ವಿಲೆಯ ವಿಫಲತೆ]** ಸ್ವತ್ತು ವರ್ಗಾವಣೆ (ತಿದ್ದುಪಡಿ) ಪೂರಕ ಅಧಿನಿಯಮ, 1929 (1929ರ 21)ರ 12ನೇ ಪ್ರಕರಣದ ಮೂಲಕ ನಿರಸನಗೊಳಿಸಲಾಗಿದೆ.

**5. ಖೋಜಾ ಸಮುದಾಯಕ್ಕೆ ಈ ಅಧಿನಿಯಮದ ಅನ್ವಯ.–** ರಾಜ್ಯದಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಇರುವ ಖೋಜಾ ಸಮುದಾಯವು ಈ ಅಧಿನಿಯಮದ ಉಪಬಂಧಗಳು ಅಂಥ ಸಮುದಾಯಕ್ಕೂ ವ್ಯಾಪ್ತವಾಗಬೇಕೆಂದು ಅಪೇಕ್ಷಿಸುತ್ತದೆ ಎಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟಲ್ಲಿ, ‘‘ಹಿಂದೂಗಳು’’ ಅಥವಾ ‘‘ಹಿಂದೂ’’ ಎಂಬ ಪದಗಳು ಎಲ್ಲಿ ಬರುತ್ತವೆಯೋ, ಅಲ್ಲೆಲ್ಲಾ ಅವುಗಳ ಬದಲಾಗಿ ಸಂದರ್ಭಾನುಸಾರ, ‘‘ಖೋಜಾಗಳು’’ ಅಥವಾ ‘‘ಖೋಜಾ’’ ಎಂಬ ಪದಗಳನ್ನು ಸೇರಿಸಿ, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶದಲ್ಲಿರುವ ಆ ಸಮುದಾಯಕ್ಕೆ ಈ ಅಧಿನಿಯಮದ ಉಪಬಂಧಗಳು ಅನ್ವಯವಾಗತಕ್ಕವೆಂದು ಘೋಷಿಸಬಹುದು ಮತ್ತು ಆಮೇಲೆ ತದನುಸಾರವಾಗಿ ಈ ಅಧಿನಿಯಮವು ಪರಿಣಾಮಕಾರಿಯಾಗತಕ್ಕದ್ದು.

* * * * *